



## ಕ್ಯಾನ್‌ವಾಸ್ ಮೇಲೆ ಕುಸುಮಗಳು...

ಚಿತ್ರಕಲೆ ಭಾಷೆಯನ್ನು ಮೀರಿದ ಕಲೆ. ಚಿತ್ರಕಲಾಕೃತಿಯನ್ನು ರಚಿಸುವಲ್ಲಿ ಅಗಾಧ ತಾಳ್ಮೆ, ಚಿಂತನೆ ಪ್ರಮುಖ ಪಾತ್ರವಹಿಸುತ್ತದೆ. ಬಂದ ಚಿಂತನೆಯನ್ನು ಯಥಾವತ್ತಾಗಿ ಮೂರ್ತರೂಪ ನೀಡುವುದು ಸವಾಲಿನ ಕೆಲಸವೇ ಸರಿ. ಇದರಂತೆ ಕ್ಯಾನ್‌ವಾಸ್ ಮೇಲೆ ಅರಳುವ ಚಿತ್ರಕಲೆಯನ್ನು ನೋಡುವುದೇ ಒಂದು ಆನಂದ. ಚಿತ್ರಕಲಾವಿದರು ತಮ್ಮ ವಿಭಿನ್ನ ಚಿಂತನೆಯಿಂದ ಕುಂಚ, ಬಣ್ಣಗಳ ನೆರವಿನಿಂದ ಚಿತ್ತಾಕರ್ಷಕವಾದ ಕಲಾಕೃತಿಗಳನ್ನು ಬಿಡಿಸಿ ನೋಡುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಾರೆ.

ರಾಯಚೂರಿನ ಕನ್ನಡ ಭವನದಲ್ಲಿ ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ ರಾಯಚೂರು ಜಿಲ್ಲಾ ಕಲಾವಿದರಿಂದ ಕಲಾಕೃತಿಗಳ ಪ್ರದರ್ಶನ ಕಲಾಸ್ತಕರ ಗಮನ ಸೆಳೆಯಿತು. ಕರ್ನಾಟಕ ಲಲಿತಾ ಕಲಾ ಅಕಾಡೆಮಿಯಿಂದ ಏರ್ಪಡಿಸಿದ್ದ ಎರಡು ದಿನಗಳ ನಡೆದ ಈ ಪ್ರದರ್ಶನದಲ್ಲಿ ನೂರಾರು ಚಿತ್ರಕಲಾಕೃತಿಗಳು ಪ್ರದರ್ಶನಗೊಂಡಿದ್ದವು. ಪ್ರಕೃತಿ ಕುರಿತಾದ ಕಲಾಕೃತಿಗಳು, ಜನಪದ ಶೈಲಿಯ ಕಲಾಕೃತಿಗಳು ಕೊರೊನಾ ಕಲಾಕೃತಿಗಳು, ಇನ್ನಿತರ ಪೊಯೆಟ್ರೆಟ್, ಲ್ಯಾಂಡ್ ಸ್ಕೇಪ್ ಕಲಾಕೃತಿಗಳು ಕನ್ನಡ ಭವನದಲ್ಲಿ ತುಂಬಿ ತುಳುಕಾಡುತ್ತಿದ್ದವು. ಚಿತ್ರಕಲಾಕೃತಿಗಳ ಪ್ರದರ್ಶನದ ಜೊತೆ ಹಿರಿಯ ಕಲಾವಿವದರಿಂದ ಚಿತ್ರಕಲಾ ಪ್ರಾತ್ಯಕ್ಷಿಕೆಯನ್ನು ಸಹ ಮಾಡಲಾಯಿತು. ಕನ್ನಡ ಭವನ ಆರ್ಟ್ ಗ್ಯಾಲರಿಯಂತೆ ಕಂಗೊಳಿಸುವಂತೆ ಕಲಾಕೃತಿಗಳು ಸಹಕರಿಸಿದ್ದವು.

—ಈರಣ್ಣ ಬೆಂಗಾಲಿ ರಾಯಚೂರು

## ಬಂಡೆ ರಂಗ ಬಂಡಿ ಸಂಗ

ಹೋಳಿಹುಣ್ಣಿಮೆಯಂದು ಜರುಗುವ ಐತಿಹಾಸಿಕ ಬಂಡೆರಂಗನಾಥ ಜಾತ್ರೆಗೆ ವಿಶೇಷ ಮಹತ್ವವಿದೆ. ಈ ಜಾತ್ರೆಯ ವಿಶೇಷವೆಂದರೆ ಸುತ್ತಮುತ್ತಲಿನ ಸುಮಾರು 40–50 ಹಳ್ಳಿಗಳ ಜನರು ಬಂಡಿಗಳನ್ನು ಕಟ್ಟಿಕೊಂಡು ಜಾತ್ರೆಗೆ ಬರುತ್ತಾರೆ. ಕೇವಲ ಎರಡು ದಿನಗಳ ಈ ಜಾತ್ರೆಯ ವಿಶೇಷ ಆಕರ್ಷಣೆ ಎಂದರೆ ನೂರಾರು ಬಂಡಿಗಳು ಮತ್ತು ಎತ್ತುಗಳು. ಮೊದಲೆಲ್ಲಾ ಸಾವಿರಾರು ಕಟ್ಟಿಗೆಯ ಬಂಡಿಗಳು—ಎತ್ತುಗಳು ಸೇರಿ ಕೆಂದೂಳಿನ ಓಕುಳಿ ಎಬ್ಬಿಸಿ ಜನರನ್ನು ಅದರಲ್ಲಿ ಮೀಯುವಂತೆ ಮಾಡುತ್ತಿದ್ದವು.

ಈಗ ಕಟ್ಟಿಗೆಯ ಬಂಡಿಗಳು ಕಡಿಮೆಯಾಗಿ ಟೈರ್ ಬಂಡಿಗಳು ಹೆಚ್ಚಾಗಿವೆ. ಇತ್ತೀಚಿನ ಕೆಲವು ವರ್ಷಗಳಲ್ಲಂತೂ ಕಟ್ಟಿಗೆಯ ಬಂಡಿಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿದ್ದವು. ಆದರೆ ಈ ವರ್ಷ ನೂರಾರು ಟೈರ್ ಬಂಡಿಗಳ ನಡುವೆ ಒಂದು ಹೊಸ ಕಟ್ಟಿಗೆಯ ಬಂಡಿಯೂ ಅದರೊಂದಿಗೆ ಒಂಟೆಯಂತಹ ಎತ್ತುಗಳು ಕಂಡು ಅಚ್ಚರಿಯಾಯಿತು. ಬೇಸಾಯ ಪದ್ಧತಿ ಬದಲಾದ ಕಾಲದಲ್ಲಿ ಟೈರ್ ಬಂಡಿಗಳ ಅಬ್ಬರ ಹೆಚ್ಚಾಗಿದೆ. ಬಂಡೆರಂಗನಾಥನಿಗೆ ಬಂಡಿಯಲ್ಲಿ ಹೋಗಬೇಕೆಂಬ ನಂಬಿಕೆ ಸ್ಥಳೀಯರಲ್ಲಿ ಇದೆ. ಬಂಡೆರಂಗನಾಥ ಸ್ವಾಮಿ ದೇವಸ್ಥಾನ ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಎಂಬ ಗ್ರಾಮದಿಂದ ಮೂರು ಕಿ.ಮೀ. ಹೊರವಲಯದಲ್ಲಿ ಇದೆ

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ





